# 'ಸುವರ್ಣಾ'ವಕಾಶ..!



ಚಿನ್ನದ ಒಡವೆ ಮೇಲೆ ಹೆಣ್ಣಿಗೆ ಎಂದಿಗೂ ಬತ್ತದ ಬಯಕೆ. ಬೆಲೆ ಎಷ್ಟೇ ಇರಲಿ ವೈವಿಧ್ಯಮಯ ಡಿಸೈನ್‌ನ ಬಂಗಾರದ ಒಡವೆ ಖರೀದಿಸಿ ತೊಟ್ಟುಕೊಂಡರೇ ಮನಸ್ಸಿಗೆ ಸಮಾಧಾನ; ಸಂತೃಪ್ತ ಭಾವ..!

ಚಿನ್ನದಲ್ಲಿ ಯುವ ವಯಸ್ಸಿನವರಿಗಾಗಿಯೇ ತರಾವರಿ ವಿನ್ಯಾಸದ, ಹಗುರವಾದ ಕಣ್ಮನ ಸೆಳೆಯುವ ಆಭರಣಗಳು ಬಂದಿವೆ. ಇದು ಫ್ಯಾಷನೆಬಲ್ ಕೂಡ ಆಗಿದೆ. ಹೀಗಾಗಿ ಇಂದಿನ ಯುವತಿಯರ ಚಿತ್ತ ಚಿನ್ನದ ಒಡವೆಯತ್ತ ಹರಿದಿದೆ.

ಆದರೆ ಚಿನ್ನದ ಬೆಲೆ ದಿನದಿಂದ ದಿನಕ್ಕೆ ಏರುತ್ತಿರುವ ಹಿನ್ನೆಲೆಯಲ್ಲಿ ಇಂದು ಚಿನ್ನ 'ಉಳ್ಳವರಿಗೆ ಮಾತ್ರ' ಎಂಬ ಸ್ಲೋಗನ್ ಅಂಟಿಸಿಕೊಂಡಿದೆ. ಕಡಿಮೆ ತೂಕದ, ಚಂದ ಚಂದ ವಿನ್ಯಾಸದ ಒಡವೆ ಲುಕ್‌ನಲ್ಲಿ ಪೈಪೋಟಿ ನಡೆಸುತ್ತಿದೆ. ಇದು ಮಧ್ಯಮ ವರ್ಗದವರನ್ನೂ ಸೆಳೆಯುತ್ತಿದೆ. ಉಂಗುರ, ಸರ, ಕಿವಿಯೋಲೆ, ಬ್ರೇಸ್‌ಲೆಟ್‌ಗಳು ಹತ್ತು ಹಲವು ವಿನ್ಯಾಸಗಳಲ್ಲಿ ಬಂದಿದ್ದು, ಅತ್ಯಂತ ಕಡಿಮೆ ಚಿನ್ನದಲ್ಲಿ, ಸುಂದರ ವಿನ್ಯಾಸದಲ್ಲಿ ಈಗ ಸಿಗುತ್ತಿದೆ.

ಕೆಲಕಾಲ ಮರೆಯಾಗಿದ್ದ, ವಯಸ್ಸಾದ ಮಹಿಳೆಯರ ಕತ್ತಿನಲ್ಲಿ ಮಾತ್ರವೇ ಶೋಭಿಸುತ್ತಿದ್ದ ಸಾಂಪ್ರದಾಯಿಕ ಆಭರಣಗಳು ಈಗ ಹೊಸ ವಿನ್ಯಾಸ, ಹೊಸ ಫ್ಯಾಷನ್‌ನೊಂದಿಗೆ ಮತ್ತೆ ಬಂದಿದೆ. ಈ ಆ್ಯಂಟಿಕ್ ಆಭರಣ ಈಗ ಆಧುನಿಕ–ಸಾಂಪ್ರದಾಯಿಕ ಎರಡೂ ಮನೋಭಾವದ ಮಹಿಳೆಯರಿಗೆ ಎಲಿಗೆಂಟ್ ಲುಕ್ ಕೊಡುತ್ತಿದೆ. ಇಬ್ಬರನ್ನೂ ಒಂದುಗೂಡಿಸಿ ಫ್ಯಾಷನ್ ಆಗಿಯೂ ಜನಪ್ರಿಯವಾಗುತ್ತಿದೆ.

ಬಹುಶಃ ಭಾರತದಲ್ಲಿರುವಷ್ಟು ವೆರೈಟಿ ಸಾಂಪ್ರದಾಯಿಕ ಆಭರಣಗಳು ಇನ್ನು ಯಾವುದೇ ರಾಷ್ಟ್ರದಲ್ಲಿ ಇರಲಿಕ್ಕಿಲ್ಲ. ಪ್ರಾಂತೀಯತೆ, ಪ್ರಾದೇಶಿಕತೆಗೆ ಸಂಬಂಧಿಸಿದಂತೆ ವಿಭಿನ್ನ ರೀತಿಯ ಆ್ಯಂಟಿಕ್ ಆಭರಣಗಳು ಲಭ್ಯ. ಈ ಆಭರಣಗಳು ರಾಯಲ್ ಮತ್ತು ಎಥ್ನಿಕ್ ಎರಡೂ ಲುಕ್ ಕೊಡುತ್ತವೆ. ಆಧುನಿಕ ಕಾಲಕ್ಕೆ ತಕ್ಕಂತೆಯೂ ಈ ಆಭರಣಗಳು ಮಹಿಳೆಯರ ಮನೆ–ಮನ ಗೆದ್ದಿವೆ. ಅಲ್ಲದೆ ಭಾರತೀಯ ಸಾಂಪ್ರದಾಯಿಕ ಆಭರಣಗಳು ಜಾಗತಿಕ ಮಟ್ಟದಲ್ಲಿ ಗುರುತಿಸಲ್ಪಟ್ಟಿದೆ.

ಕುಸುರಿ ಕೆಲಸದಿಂದ ಕೂಡಿದ ವಜ್ರದ ಹರಳಿನ ಪೆಂಡೆಂಟ್ ಇರುವ ತೆಳು ಎಳೆಗಳ ಸರ ಈಗಿನ ಫ್ಯಾಷನ್. ಸಾಂಪ್ರದಾಯಿಕ ಮತ್ತು ಆಧುನಿಕ ಎರಡೂ ಉಡುಪಿಗೂ ಇದು ಸೂಕ್ತವಾದದ್ದು. ವಿವಿಧ ಬಣ್ಣದ ವಜ್ರದ ಕಲ್ಲುಗಳನ್ನು ಹೊಂದಿರುವ ನೆಕ್ಲೆಸ್, ಪೆಂಡೆಂಟ್ ನೋಡಲು ಆಕರ್ಷಕ.

ಎಥ್ನಿಕ್, ಕುಂದನ್ ಶೈಲಿಯ ಕಿವಿ ಓಲೆಗಳು ಈಗ ಹೆಚ್ಚು ಜನಪ್ರಿಯವಾಗುತ್ತಿದೆ. ರೂಬಿ, ಕೆಂಪು, ನೀಲ, ಪಚ್ಚೆ ಹರಳುಗಳ ಆಭರಣಗಳೂ ಆ್ಯಂಟಿಕ್‌ನಲ್ಲಿ ಬರುವುದರಿಂದ ಮತ್ತು ಕುಸುರಿ ಕೆಲಸ ಇರುವುದರಿಂದ ಮಹಿಳೆಯರು ಇಷ್ಟಪಡುತ್ತಾರೆ.

## ಆಭರಣ ಮೇಳ

ವರ್ಷಂಪ್ರತಿ ನಡೆಯುವ ಆಭರಣ ಮೇಳ ಈ ಬಾರಿ ಹಲವು ವಿಭಿನ್ನ ವೈಶಿಷ್ಟ್ಯಗಳಿಂದ ಕೂಡಿದೆ. ಜ್ಯುವೆಲ್ಸ್ ಆಫ್ ಇಂಡಿಯಾ ಅಕ್ಟೋಬರ್ 15ರಿಂದ 17ರವರೆಗೆ ಬೆಂಗಳೂರಿನ ಅರಮನೆ ಮೈದಾನದಲ್ಲಿ ಏರ್ಪಾಡಾಗಿದೆ. ವಿವಿಧ ಜ್ಯುವೆಲ್ ಬ್ರ್ಯಾಂಡಿನ, ಬೆಲೆಯ ಆಭರಣ ಈ ಮೇಳದಲ್ಲಿ ಮೇಳೈಸಲಿದೆ.

ನಟಿ ಲಕ್ಷ್ಮಿ ಗೋಪಾಲಸ್ವಾಮಿ ಜ್ಯುವೆಲ್ಸ್ ಆಫ್ ಇಂಡಿಯಾದ ಈ ಭಾರಿಯ ಪ್ರಚಾರ ರಾಯಭಾರಿ. ದಸರಾ, ದೀಪಾವಳಿ ಹಬ್ಬದ ಸಂದರ್ಭದಲ್ಲಿ ಆಭರಣ ಮೇಳ ಏರ್ಪಡಿಸಿದ್ದು ಸಾಂದರ್ಭಿಕವಾಗಿಯೂ ಮಹತ್ವ ಪಡೆದುಕೊಂಡಿದೆ. ಸುಮಾರು 100ಕ್ಕೂ ಹೆಚ್ಚು ಆಭರಣ ಮಳಿಗೆಗಳು ಇಲ್ಲಿದ್ದು, ಮಿಂಚಿನಂತೆ ಗ್ರಾಹಕರನ್ನು ಸೆಳೆಯುತ್ತಿದೆ.

'ಚಿನ್ನದ ಮೇಲೆ ಹೂಡಿಕೆ ಎಂದಿಗೂ ಸಹಾಯಕ್ಕೆ ಬರುವಂಥದ್ದು ಮತ್ತು ಅದರಿಂದ ಯಾವುದೇ ನಷ್ಟವಿಲ್ಲ. ಹೀಗಾಗಿ ಮಹಿಳೆಯರು ಹೆಚ್ಚು ಹೆಚ್ಚು ಚಿನ್ನವನ್ನು ಖರೀದಿಸಿ; ಇದು ಅಮೂಲ್ಯ ಆಸ್ತಿ' ಎನ್ನುತ್ತಾರೆ ಜ್ಯುವೆಲ್ಸ್ ಆಫ್ ಇಂಡಿಯಾದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ (ಸಿಇಒ) ಮತ್ತು ಆಭರಣ ಮೇಳದ ಸಂಚಾಲಕ ಸಂದೀಪ್ ಬೇಕಲ್.

ಈ ಮೇಳದಲ್ಲಿ ಜೈಪುರದ ಕ್ಲಾಸಿಕ್ ಕುಂದನ್ ಮತ್ತು ಮಿನಾಕರಿ ಕಲೆಕ್ಷನ್, ತಮಿಳುನಾಡಿನ ಟೆಂಪಲ್ ಅಂಡ್ ಆ್ಯಂಟಿಕ್ ಜುವೆಲ್ಲರಿ, ರಾಜಸ್ತಾನದ ಎಕ್ಸಾಟಿಕ್ ಥೇವ, ಮುಂಬಯಿಯ ಡಿಸೈನರ್‌ವೇರ್ ಅಂಡ್ ಬ್ರ್ಯಾಂಡೆಡ್ ಡೈಮಂಡ್ ಜ್ಯುವೆಲ್ಲರಿ, ಕೋಲ್ಕತ್ತದ ಹ್ಯಾಂಡಿಕ್ರಾಫ್ಟೆಡ್ ಗೋಲ್ಡ್ ಜ್ಯುವೆಲ್ಲರಿ ಅಂಡ್ ಟ್ರೈಬಲ್ ಡಿಸೈನ್ಸ್, ಬ್ರೈಡಲ್ ಕಲೆಕ್ಷನ್, ಬಳೆ ಸಂಗ್ರಹ, ಫ್ಯೂಷನ್ ಜ್ಯುವೆಲ್ಲರಿ, ಜೈಪುರ ಅಮ್ರಪಾಲಿ ಜ್ಯುವೆಲ್ಲರಿ, ಮೆನ್ಸ್ ಜ್ಯುವೆಲ್ಲರಿ... ಹೀಗೆ ವೈವಿಧ್ಯಮಯ ಆಭರಣ ಸಂಗ್ರಹ ಒಂದೇ ಸೂರಿನಡಿಯಲ್ಲಿ ಲಭ್ಯ. ಕೊಳ್ಳುವವರಿಗೂ ಇದು ಒಂದು ಸುವರ್ಣಾವಕಾಶ..!

■ ಉಮಾ ಅನಂತ್

